# <u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಕಪಂರಾಅ/ಅಭಿವೃದ್ಧಿ/510/2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 06-12-2021.

## <u>ಸುತ್ತೋಲೆ</u>

**<u>ವಿಷಯ</u>**: ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಡಿಜಿಟಲೀಕರಣ ಮತ್ತು ತಾಲ್ಲೂಕಿಗೊಂದರಂತೆ ಬೀಕನ್ (Beacon) ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವ ಬಗ್ಗೆ.

**ಉಲ್ಲೇಖ**:
1. ಪತ್ರ ಸಂಖ್ಯೆ: ಕಪಂರಾಅ/ಪಂ.ರಾಜ್/175/2020-21 ದಿನಾಂಕ: 08-01-2021.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/14/2021 ದಿನಾಂಕ 01-02-2021.
3. ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.ಪಿ.ಆರ್. 62ಜಿ.ಪಿ.ಎಸ್. 2020, ಬೆಂಗಳೂರು. ದಿನಾಂಕ 26-05-2021.
4. ಸರ್ಕಾರದ ಆದೇಶ ಸಂಖ್ಯೆ: ಕಪಂರಾಅ/ಅಭಿವೃದ್ಧಿ/281/2021 ದಿನಾಂಕ 13-08-2021.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/453/2021 ದಿನಾಂಕ 30-10-2021.

***

ಉಲ್ಲೇಖ (1)ರ ಪತ್ರದಲ್ಲಿ ರಾಜ್ಯದ 5623 ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಉನ್ನತೀಕರಿಸುವ ಹಾಗೂ ಡಿಜಿಟಲ್ ಗ್ರಂಥಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಮೂಲಕ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ಯುವಕ ಯುವತಿಯರಿಗೆ, ಮಾಹಿತಿ ಮತ್ತು ಸಂವಹನ ಸೇವೆಯನ್ನು ಅಭಿವೃದ್ಧಿ ಹೊಂದಿದ ನಗರ ಪ್ರದೇಶದ ನಿವಾಸಿಗಳಿಗೆ ದೊರೆಯುತ್ತಿರುವಂತೆ ಉತ್ತಮ ಶೈಕ್ಷಣಿಕ ಮಾಹಿತಿಗೆ ಸರಿ ಸಮಾನವಾದ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಗಳಲ್ಲಿಯೂ ಒದಗಿಸುವುದರ ಮೂಲಕ ಅವರ ಶೈಕ್ಷಣಿಕ ಮತ್ತು ಬೌದ್ಧಿಕ ಮಟ್ಟವನ್ನು ವೃದ್ಧಿಸಲು ತಿಳಿಸಲಾಗಿದೆ.

ಈ ಉದ್ದೇಶಕ್ಕಾಗಿ 15ನೇ ಹಣಕಾಸಿನ ಯೋಜನೆಯಿಂದ ಅಥವಾ ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲದಿಂದ ಗ್ರಂಥಾಲಯಗಳನ್ನು ಡಿಜಿಟಲೀಕರಣಗೊಳಿಸಲು ಸಂಬಂಧಿಸಿದಂತೆ,

1. ಕನಿಷ್ಠ 02 ಗಣಕ ಯಂತ್ರಗಳು (ಗ್ರಂಥಾಲಯದಲ್ಲಿನ ಸ್ಥಳದ ಚಂದಾದಾರರ ಬೇಡಿಕೆ ಅನುಸಾರ ಗಣಕ ಯಂತ್ರಗಳನ್ನು ಹೆಚ್ಚಿಸಬಹುದು)
2. ಯುಪಿಎಸ್ ವ್ಯವಸ್ಥೆ(1 ರಿಂದ 2 ಕೆವಿ ಯವರೆಗೆ)
3. ವೈಫೈ, ರೌಟರ್ ಮತ್ತು ಮೋಡಮ್ ಜಾಲತಾಣದ ವ್ಯವಸ್ಥೆ

4. ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಒದಗಿಸುವ ಸಲುವಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಅಭಿವೃದ್ಧಿ ಪಡಿಸಿರುವ "ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ" ಜಾಲತಾಣದ ಸೇವೆಯನ್ನು ಪಡೆಯುವುದು.
5. ಇ-ಪುಸ್ತಕಗಳು ಮತ್ತು ಶೈಕ್ಷಣಿಕ ವೀಡಿಯೋಗಳನ್ನು ಮೊಬೈಲ್ ಆ್ಯಪ್ e-Sarvajanika Granthalaya ನಲ್ಲಿಯೂ ಪಡೆಯಬಹುದು.

ಸದರಿ ಉಲ್ಲೇಖ ಪತ್ರ (1)ರ ಅನುಬಂಧದಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನಾಗಿ ಮಾಡಲು ಕೈಗೊಳ್ಳಬೇಕಾದ ಕ್ರಮದ ಕುರಿತು ಹಾಗೂ ಜಾಲತಾಣವನ್ನು ಬಳಸುವ ಕುರಿತು ವಿವರಿಸಲಾಗಿದೆ. ಇ-ಪುಸ್ತಕಗಳು ಮತ್ತು ಶೈಕ್ಷಣಿಕ ವೀಡಿಯೋಗಳನ್ನು ಸದರಿ ಜಾಲತಾಣದಲ್ಲಿ ಪಡೆಯ ಬಹುದಾಗಿರುವುದರಿಂದ ಡಿಜಿಟಲ್ ಕಂಟೆಂಟ್ ಖರೀದಿ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ಸಹ ತಿಳಿಸಿದೆ. ನಿಯಮಾನುಸಾರ ಪರಿಶೀಲಿಸಿ ಅದರಂತೆ ಕ್ರಮವಹಿಸುವುದು.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಗ್ರಂಥಾಲಯದ ಉಪಕರವನ್ನು ಗ್ರಂಥಾಲಯದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ಉದ್ದೇಶಗಳಿಗೆ ಬಳಸಲು ತಿಳಿಸಲಾಗಿದೆ.

1. ಗ್ರಂಥಾಲಯಕ್ಕೆ ನೊಂದಾಯಿಸುವ ಸದಸ್ಯರ ಸದಸ್ಯತ್ವ ಅರ್ಜಿ ನಮೂನೆ ಮತ್ತು ಸದಸ್ಯತ್ವ ಕಾರ್ಡ್ ಮುದ್ರಿಸಲು
2. ಗ್ರಂಥಾಲಯಗಳಲ್ಲಿ ಅಗತ್ಯವಿರುವ ವಹಿಗಳನ್ನು ಮತ್ತು ಲೇಖನಾ ಸಾಮಾಗ್ರಿಗಳನ್ನು ಖರೀದಿಸಲು,
3. ಗ್ರಂಥಾಲಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು,
4. ಗ್ರಂಥಾಲಯದ ನೈರ್ಮಲ್ಯತೆ, ಸ್ವಚ್ಛತೆ ಕಾರ್ಯಕ್ಕೆ ಮತ್ತು ಸ್ಯಾನಿಟೈಜರ್ ವ್ಯವಸ್ಥೆಗಾಗಿ,
5. ಗ್ರಂಥಾಲಯದ ವಿದ್ಯುತ್ ರಿಪೇರಿಗಾಗಿ ,
6. ಸಾರ್ವಜನಿಕ ಗ್ರಂಥಾಲಯದ ಮಾರ್ಗಸೂಚಿಯಲ್ಲಿ ನಿಗದಿ ಪಡಿಸಿರುವ ದರಗಳಲ್ಲಿ ಮಕ್ಕಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಖರೀದಿಸಿ ಮಕ್ಕಳಿಗೆ ಓದಲು ಪ್ರತ್ಯೇಕ ವಿಭಾಗವನ್ನು ಗ್ರಂಥಾಲಯದಲ್ಲಿ ಅಭಿವೃದ್ಧಿ ಪಡಿಸಲು,
7. ಗ್ರಂಥಾಲಯದಲ್ಲಿ ಸೂಚನಾ ಫಲಕಗಳನ್ನು ವ್ಯವಸ್ಥೆ ಮಾಡಲು,
8. ಗ್ರಂಥಾಲಯಗಳಲ್ಲಿ ಕಡ್ಡಾಯವಾಗಿ ಇರಿಸಬೇಕಾದ ಪುಸ್ತಕಗಳು/ಪತ್ರಿಕೆಗಳು/ಪೋಸ್ಟರ್ ಗಳನ್ನು ವ್ಯವಸ್ಥೆ ಮಾಡಲು ತಿಳಿಸಲಾಗಿದೆ.

2021-22ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ 5623 ಗ್ರಾಮೀಣ ಗ್ರಂಥಾಲಯಗಳನ್ನು ಗ್ರಾಮೀಣ ಮಾಹಿತಿ ಮತ್ತು ಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗುವುದು, ಹಾಗೂ ದೃಷ್ಟಿ ಸವಾಲಿಗೊಳಗಾದ ಮಕ್ಕಳಿಗೆ ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿಗೊಂದರಂತೆ ಬ್ರೈಲ್ ಹಾಗೂ ಶ್ರವ್ಯ ಪುಸ್ತಕಗಳನ್ನು ಒಳಗೊಂಡ ಬೀಕನ್ (Beacon) ಗ್ರಂಥಾಲಯವನ್ನು ಪ್ರಾರಂಭಿಸಲಾಗುವುದೆಂದು ಘೋಷಿಸಲಾಗಿದೆ.

ಉಲ್ಲೇಖ(3)ರ ಸರ್ಕಾರಿ ಆದೇಶದ ಮೂಲಕ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಹೆಸರನ್ನು "ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ" ಎಂದು ಮರು ಪದನಾಮೀಕರಿಸಲಾಗಿದೆ

ಉಲ್ಲೇಖ (4) ರಲ್ಲಿನ ಸರ್ಕಾರಿ ಆದೇಶದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ,ಜಿಲ್ಲಾ ಪಂಚಾಯಿತಿಗಳಿಗೆ ನಿಗಧಿಪಡಿಸಿರುವ ಹಾಗೂ ಸ್ವಂತ ಸಂಪನ್ಮೂಲಗಳಿಂದ ಬರುವ ಅನುದಾನ ಸೇರಿಸಿ (ಸಂಬಳ ಬಾಬ್ತನ್ನು ಹೊರತುಪಡಿಸಿ) ಆಗುವ ಒಟ್ಟು ಅನುದಾನದಲ್ಲಿ ಶೇಕಡ 5% ರಷ್ಟು

ಅನುದಾನ ಮತ್ತು 15 ನೇ ಹಣಕಾಸು ಯೋಜನೆ ಅಡಿಯಲ್ಲಿನ ಅನುದಾನ ಬಳಕೆ ಮಾಡಿ, ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಲಾದ ಆದೇಶಗಳನ್ನು ಅನುಸರಿಸಿ ಎಲ್ಲಾ ಅಗತ್ಯ ಸೌಲಭ್ಯಗಳೊಂದಿಗೆ ಮಾದರಿ ಗ್ರಂಥಾಲಯವನ್ನಾಗಿ ಮಾಡುವುದರ ಮೂಲಕ 2021-22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ದೃಷ್ಟಿ ಸವಾಲಿಗೊಳಗಾದ ಮಕ್ಕಳಿಗೆ ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿಗೊಂದರಂತೆ ಬ್ರೈಲ್ ಹಾಗೂ ಶ್ರವ್ಯ ಪುಸ್ತಕಗಳನ್ನು ಒಳಗೊಂಡ ಬೀಕನ್ (Beacon) ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲು ತಿಳಿಸಿದೆ.

ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುವಂತೆ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳನ್ನು ನಿಯಮಾನುಸಾರ ಪರಿಶೀಲಿಸಿ ಅದರಂತೆ ಡಿಜಿಟಲೀಕರಣಗೊಳಿಸಲು ಕ್ರಮವಹಿಸುವುದು.

ಈ ನಿಟ್ಟಿನಲ್ಲಿ ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಎರಡು ಜಿಲ್ಲೆಗಳ ಸಾಧನೆ ಶ್ಲಾಘನೀಯವಾಗಿದೆ. ಗ್ರಂಥಾಲಯಗಳ ಡಿಜಿಟಲೀಕರಣಗೋಲಿಸುವಲ್ಲಿ ಶ್ರಮವಹಿಸಿದ ಸದರಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಉಪಕಾರ್ಯದರ್ಶಿ, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ತಂಡದ ಎಲ್ಲ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸಿದೆ.

ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸೋಲಾರ್ ವಿದ್ಯುತ್ ಘಟಕಗಳನ್ನುಅಳವಡಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಇದರಡಿ ಅಳವಡಿಸಲಾಗುವ ಇನ್ ವರ್ಟರ್ ಹಾಗೂ ಬ್ಯಾಟರಿಗಳ ಮೂಲಕ ಸೋಲಾರ್ ವಿದ್ಯುತ್ ಅನ್ನು ಡಿಜಿಟಲ್ ಗ್ರಂಥಾಲಯಗಳಿಗೆ ಬಳಸಿಕೊಳ್ಳಬಹುದಾಗಿದ್ದು, ಪ್ರತ್ಯೇಕವಾಗಿ ಯುಪಿಎಸ್ ಗಳನ್ನು ಖರೀದಿಸುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಸೋಲಾರ್ ವಿದ್ಯುತ್ ಘಟಕಗಳನ್ನು ಅಳವಡಿಸಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಂಥಾಲಯಗಳು ಇದರ ಉಪಯೋಗವನ್ನು ಪಡೆಯಬಹುದಾಗಿದೆ. ಇದರ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸುವುದು.

ಡಿಜಿಟಲೀಕರಣಕ್ಕೆ ಸಂಬಂಧಿಸಿದಂತೆ ಗಣಕ ಯಂತ್ರಗಳ ಮತ್ತು ಸಂಬಂಧಿಸಿದ ಪರಿಕರಗಳ ನಿರ್ವಹಣೆಗಾಗಿ ವಾರ್ಷಿಕವಾಗಿ ತಗಲುವ ವೆಚ್ಚವನ್ನು ಅಂದಾಜಿಸಿ, ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ನಿಯಮಾನುಸಾರ ಕ್ರಮವಹಿಸುವುದು.

ಉಲ್ಲೇಖ (5) ರ ಸುತ್ತೋಲೆಯಲ್ಲಿ ಓದುವ ಬೆಳಕು ಕಾರ್ಯಕ್ರಮದ ಅಂಗವಾಗಿ "ಓದಿನ ಮನೆಗೆ ಹೋಗೋಣ" ಎಂಬ ಅಭಿಯಾನವನ್ನು 1ನೇ ನವಂಬರ್ 2021 ರಿಂದ 26ನೇ ಜನವರಿ 2022ರವರೆಗೆ ನಡೆಸಲು ತಿಳಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ 26ನೇ ಜನವರಿ 2022 ರೊಳಗೆ (1) ಅಮೃತ ಗ್ರಾಮ ಪಂಚಾಯಿತಿಗಳಲ್ಲಿನ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳನ್ನು

ಡಿಜಿಟಲೀಕರಣಗೊಳಿಸಲು (2) ತಾಲ್ಲೂಕಿಗೊಂದರಂತೆ ಬ್ರೈಲ್ ಹಾಗೂ ಶ್ರವ್ಯ ಪುಸ್ತಕಗಳನ್ನು ಒಳಗೊಂಡ ಬೀಕನ್ (Beacon) ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲು ಸಹ ತಿಳಿಸಲಾಗಿದೆ.

ಆದುದರಿಂದ ಅಮೃತ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಡಿಜಿಟಲೀಕರಣವನ್ನು ಮತ್ತು ತಾಲ್ಲೂಕಿಗೊಂದರಂತೆ ಬೀಕನ್ (Beacon) ಗ್ರಂಥಾಲಯವನ್ನು 26ನೇ ಜನವರಿ 2022 ರೊಳಗೆ ಕಾರ್ಯಗತಗೊಳಿಸಲು ಹಾಗೂ ಉಳಿದ ಗ್ರಂಥಾಲಯಗಳ ಡಿಜಿಟಲೀಕರಣವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಆದೇಶಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂಚಾಯತ್ ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ</u>:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಉಪಕಾರ್ಯದರ್ಶಿಗಳು.
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

3. ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ವಿಶೇಷ ಅಧಿಕಾರಿ, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**<u>ಪ್ರತಿಯನ್ನು ಮಾಹಿತಿಗಾಗಿ:</u>**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಯುಕ್ತರವರ ಆಪ್ತ ಸಹಾಯಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು.
3. ಕಚೇರಿ ಪ್ರತಿ.